"ಮಧುರ ಮಕ್ಕಳೇ- ತಂದೆಯಿಂದ ಜೀವನ್ಮುಕ್ತಿಯ ಆಸ್ತಿಯನ್ನು ಪಡೆಯುವುದಕ್ಕಾಗಿ ಮಾಯೆಯ ಸರ್ವಬಂಧನಗಳಿಂದ ಮುಕ್ತರಾಗಿ ಇಲ್ಲಿಯ ಜೀವನ್ಮುಕ್ತಿಯನ್ನು ಪಡೆದಿರುವವರೇ ಅಲ್ಲಿ ಜೀವನ್ಮುಕ್ತಿಯ ಪದವಿಯನ್ನು ಪಡೆಯಬಹುದು"

ಪ್ರಶ್ನೆ: ಈ ಜ್ಞಾನದ ಬೀಜವು ಅವಿನಾಶಿಯಾಗಿದೆ- ಹೇಗೆ?

ಉತ್ತರ: ಈ ಜ್ಞಾನದಿಂದ ಸೂರ್ಯವಂಶಿ ಮತ್ತು ಚಂದ್ರವಂಶಿಯ ಸ್ಥಾಪನೆಯಾಗುತ್ತದೆ. ಆ ರಾಜ್ಯವು ಬಹಳ ದೊಡ್ಡದಾಗಿದೆ. ಯಾವ ಆತ್ಮರು ಒಂದುಬಾರಿ ಬಂದು ಜ್ಞಾನವನ್ನು ತೆಗೆದುಕೊಂಡು ಮಧ್ಯದಲ್ಲಿ ಬಿಟ್ಟುಹೋದರೂ ಸಹ ಪುನಃ ಅವರು ಅಂತಿಮದಲ್ಲಿ ಬರುತ್ತಾರೆ ಏಕೆಂದರೆ ಅವರೂ ಸಹ ರಾಜಧಾನಿಯಲ್ಲಿ ಬರಬೇಕು. ಯಾರಲ್ಲಿ ಸಲ್ಪ ಜ್ಞಾನದ ಬೀಜ ಬೀಳುತ್ತದೆಯೋ ಅವರು ಬರುತ್ತಾರೆ. ಎಲ್ಲಿಯೂ ಹೋಗಲೂ ಸಾಧ್ಯವಿಲ್ಲ. ಈ ಮಾತುಗಳೇ ಜ್ಞಾನ ಅವಿನಾಶಿ ಎಂದು ಸಿದ್ಧ ಮಾಡುತ್ತದೆ.

ಗೀತೆ: ಭೋಲಾನಾಥನಿಗಿಂತ ಭಿನ್ನ ಯಾರೂ ಇಲ್ಲ...........

ಓಂ ಶಾಂತಿ. ಮಕ್ಕಳು ಈಗ ತಮ್ಮ ಭೋಲಾನಾಥ ಪ್ರಾಣೇಶ್ವರನ ಸಮ್ಮುಖದಲ್ಲಿ ಕುಳಿತಿದ್ದೀರಿ ಮತ್ತು ಈ ಬೇಹದ್ದಿನ ಮಾಲೀಕ ಭೋಲಾನಾಥನಿಂದಲೇ ನಮಗೆ ಪುನಃ ಸ್ವರ್ಗದ ಆಸ್ತಿಯು ಸಿಗುತ್ತದೆ ಎಂದು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಬುದ್ಧಿಯೂ ಸಹ ಅವಶ್ಯವಾಗಿ ಅಲ್ಲಿಗೆ ಹೋಗುತ್ತದೆ ಏಕೆಂದರೆ ತಂದೆಯ ಮುಖಾಂತರ ನಾವು ತಂದೆಯ ಮನೆಗೆ ಹೋಗುತ್ತೇವೆ. ಹೇಗೆ ಪ್ರಿಯತಮ ಪ್ರಿಯತಮೆಯರನ್ನು ಕರೆಯಲು ಬರುತ್ತಾರೆಯೋ ಹಾಗೆಯೇ ತಂದೆಯು ಕರೆಯಲು ಬಂದಿದ್ದಾರೆ. ಒಬ್ಬ ಪ್ರಿಯತಮ ಬಂದು ಎಲ್ಲಾ ಪ್ರಿಯತಮೆಯರನ್ನು ಹೂಗಳನ್ನಾಗಿ ಮಾಡುತ್ತಾರೆ. ಅವರ ಹೆಸರು ಪತಿತ-ಪಾವನ ಎಂದಾಗಿದೆ ಆದರೆ ಮಕ್ಕಳು ತಂದೆಯನ್ನು ಮರೆತುಹೋಗಿದ್ದಾರೆ. ಈ ರೀತಿ ಮರೆಯುವುದೂ ಸಹ ನಾಟಕದಲ್ಲಿ ನಿಶ್ಚಿತವಾಗಿದೆ. ಈ ನಾಟಕದ ರಹಸ್ಯವನ್ನು ತಿಳಿಸುತ್ತಿದ್ದಾರೆ. ನೀವು ಅದೃಷ್ಟ ನಕ್ಷತ್ರಗಳ ಮಹಿಮೆಯು ತಂದೆಗಿಂತಲೂ ಶ್ರೇಷ್ಠವಾಗಿದೆ. ಹೇಗೆ ತಂದೆಯು ಬ್ರಹ್ಮಾಂಡದ ಮಾಲೀಕರಾಗಿದ್ದಾರೆಯೋ ಹಾಗೆಯೇ ನೀವೂ ಸಹ ಬ್ರಹ್ಮಾಂಡದ ಮಾಲೀಕರಾಗಿದ್ದೀರಿ. ತಾವೂ ಸಹ ತಂದೆಯ ಜೊತೆ ಇರುವಂತಹವರಾಗಿದ್ದಿರಿ. ನಂತರ ನೀವು ಮಕ್ಕಳು ಪಾತ್ರವನ್ನಭಿನಯಿಸಬೇಕಾಗುತ್ತದೆ. ನಾವು ವೈಕುಂಠನಾಥರಾಗಲು ತ್ರಿಲೋಕಿನಾಥನ ಬಳಿ ಬಂದಿದ್ದೇವೆಂದು ನಿಮಗೆ ತಿಳಿದಿದೆ. ಮಕ್ಕಳೇ, ನೀವು ಈ ಸಮಯದಲ್ಲಿ ತ್ರಿಲೋಕಿನಾಥರಾಗಿದ್ದೀರಿ ಅಂದಾಗ ನಾನೂ ಸಹ ತ್ರಿಲೋಕಿನಾಥನಾಗಿದ್ದೇನೆಂದು ತಂದೆಯು ಹೇಳುತ್ತಾರೆ ನಂತರ ಸತ್ಯಯುಗ ಬಂದಾಗ ಅದರ ಮಾಲೀಕರು (ನಾಥರು) ನೀವಾಗುತ್ತೀರಿ ಆದರೆ ನಾನಾಗುವುದಿಲ್ಲ. ನಾನು ನೀವು ಆತ್ಮರನ್ನು ರಾವಣನ ದುಃಖದಿಂದ ಬಿಡಿಸುವುದಕ್ಕಾಗಿ ಬರುತ್ತೇನೆ. ರಾವಣನಿಂದ ನಿಮಗೆ ಬಹಳ ದುಃಖ ಸಿಕ್ಕಿದೆ. ನಾಟಕವನ್ನು ಮಕ್ಕಳು ಚೆನ್ನಾಗಿ ತಿಳಿದಿದ್ದೀರಿ. ಇದಕ್ಕೆ ನಾಲ್ಕುಯುಗಗಳಲ್ಲ ಆದರೆ ಐದು ಯುಗಗಳಿವೆ. ದೊಡ್ಡದು ನಾಲ್ಕು ಆದರೆ ಒಂದು ಸಂಗಮಯುಗ ಅದು ಗುಪ್ತಯುಗವಾಗಿದೆ. ಈ ಜ್ಞಾನವೂ ಸಹ ನೀವು ಮಕ್ಕಳ ಗಮನದಲ್ಲಿರಬೇಕು ಏಕೆಂದರೆ ಜ್ಞಾನಸಾಗರನಿಗೆ ನೀವು ಮಕ್ಕಳಾಗಿದ್ದೀರಿ. ಭಕ್ತಿಮಾರ್ಗದಲ್ಲಿಯೂ ಅವರ ಮಹಿಮೆಯನ್ನು ಮಾಡಲಾಗುತ್ತದೆ. ನೀವು ಜ್ಞಾನಸಾಗರ, ಶಾಂತಿಯ ಸಾಗರನಾಗಿದ್ದೀರಿ ಎನ್ನುವ ಈ ಮಹಿಮೆಯು ವೈಕುಂಠನಾಥನಿಗೆ ಹೊಂದುವುದಿಲ್ಲ. ಸರ್ವಜ್ಞ, ಸರ್ವಗುಣ ಸಂಪನ್ನ, 16 ಕಲಾ...... ಎಂದು ಅವರಿಗೆ ಹೇಳಲಾಗುತ್ತದೆ. ಈ ಕಲಿಯುಗದಲ್ಲಿ ಯಾರೂ ಇಲ್ಲ ಅಂದಾಗ ಅವಶ್ಯವಾಗಿ ಮಾಡುವಂತಹವರು ಬರುತ್ತಾರೆ ಅಂದಾಗ ಸ್ವರ್ಗದ ಮಾಲೀಕರು ನೀವಾಗುತ್ತೀರಿ. ಬ್ರಹ್ಮ-ವಿಷ್ಣು-ಶಂಕರರು ಯಾರು ಸೂಕ್ಷ್ಮವತನವಾಸಿಗಳಾಗಿದ್ದಾರೆ ಅವರನ್ನು ಪ್ರವೃತ್ತಿಮಾರ್ಗದಲ್ಲಿ ತೋರಿಸುವುದಕ್ಕಾಗಿ ಯುಗಲ್ (ದಂಪತಿಯರ) ರೂಪದಲ್ಲಿ ತೋರಿಸುತ್ತಾರೆ ಅಂದಾಗ ಸ್ವರ್ಗವೂ ಇಲ್ಲಿಯೇ ಆಗುತ್ತದೆ. ಬ್ರಾಹ್ಮಣ ವರ್ಣದಿಂದ ನೀವು ದೇವತಾ ವರ್ಣದಲ್ಲಿ ಬರುತ್ತೀರಿ ನಂತರ ಕ್ಷತ್ರಿಯ ವರ್ಣದಲ್ಲಿ ಬರುತ್ತೀರಿ.

ಬುದ್ಧಿವಂತ ಮಕ್ಕಳು ವಿದ್ಯೆಯ ಕಡೆ ಚೆನ್ನಾಗಿ ಗಮನ ಕೊಡುತ್ತಾರೆ. ಹಾಗೆಯೇ ಅಜ್ಞಾನಕಾಲದಲ್ಲಿ ಮಗುವಾದರೆ ವಾರಸುಧಾರ ಬಂದನೆಂದು ತಿಳಿದುಕೊಳ್ಳುತ್ತಾರೆ. ನೀವೂ ಸಹ ಮಮ್ಮಾ, ಬಾಬಾ ಎಂದು ಹೇಳುತ್ತೀರೆಂದರೆ ವಾರಸುಧಾರರಾದಿರಿ. ಹೇಗೆ ಗಾಂಧೀಜಿಗೆ ಬಾಪೂಜಿ ಎಂದು ಹೇಳುತ್ತಾರೆಯೋ ಹಾಗೆಯೇ ಭಾರತದಲ್ಲಿ ಅನೇಕರಿಗೆ ತಂದೆ-ತಾಯಿ ಎಂದು ಹೇಳುತ್ತಾರೆ. ವೃದ್ಧರಿಗೆ ಪಿತಾಜೀ ಎಂದು ಹೇಳುತ್ತಾರೆ. ಆತ್ಮಗಳ ತಂದೆ ಈಶ್ವರನಾಗಿದ್ದಾರೆ. ತಂದೆ ಎಂದು ಹೇಳುವುದರಿಂದ ಆಸ್ತಿಯ ಖುಷಿಯು ಮನಸ್ಸಿನಲ್ಲಿ ಅನುಭವವಾಗುತ್ತದೆ. ಅವಶ್ಯವಾಗಿ ಬೇಹದ್ದಿನ ತಂದೆಯು ಬಂದು ರಾಜಯೋಗವನ್ನು ಕಲಿಸುತ್ತಾರೆ. ಬ್ರಹ್ಮಾ-ವಿಷ್ಣು-ಶಂಕರರು ರಾಜಯೋಗವನ್ನು ಕಲಿಸಲು ಸಾಧ್ಯವಿಲ್ಲ. ಭಗವಾನುವಾಚ- ದೈವೀಗುಣವುಳ್ಳಂತಹ ಮನುಷ್ಯರು ದೇವತೆಗಳಾಗಿದ್ದಾರೆ. ಪರಮೇಶ್ವರ ಅಂದರೆ ತಂದೆಯಾಗಿದ್ದಾರೆ. ಭಾರತದಲ್ಲಿಯೂ ಸಹ ಹೇಳುತ್ತಾರೆ ಪರಮಪಿತ ಪರಮಾತ್ಮ, ಸುಪ್ರೀಂ ಗಾಡ್ಫಾದರ್ ಅಂದಾಗ ಬುದ್ಧಿಯು ಮೇಲೆ ಹೊರಟುಹೋಗುತ್ತದೆ ಏಕೆಂದರೆ ತಂದೆಯು ಮೇಲಿದ್ದಾರೆಂದು ತಿಳಿಯುತ್ತಾರೆ. ಈಗ ನೀವು ಮಕ್ಕಳು ತಿಳಿದಿದ್ದೀರಿ- ನಾವೂ ಸಹ ಅಲ್ಲಿರುವಂತಹವರು, ಈಗ ನಾವು ಆ ಪ್ರಾಣೇಶ್ವರನ ಸಮ್ಮುಖದಲ್ಲಿ ಕುಳಿತಿದ್ದೇವೆ.

ತಂದೆಯ ಸಮ್ಮುಖದಲ್ಲಿ ನೆನಪು ಜೋಡಿಸಿದಾಗ ಅವಶ್ಯವಾಗಿ ಇವರು ಯಾವುದೇ ಸಾಧು-ಮಹಾತ್ಮರಲ್ಲ, ತಂದೆ-ತಾಯಿಯ ಸಮ್ಮುಖದಲ್ಲಿ ಕುಳಿತಿದ್ದೇವೆಂದು ನಿಶ್ಚಯವಾಗುತ್ತದೆ. ಏಕೆ ಅವರಿಗೆ ಮಕ್ಕಳಾಗಿದ್ದೀರಿ? ತಂದೆ-ತಾಯಿಯಿಂದ ಭವಿಷ್ಯದ 21 ಜನ್ಮಗಳ ಆಸ್ತಿಯನ್ನು ತೆಗೆದುಕೊಳ್ಳಬೇಕು. ಒಂದುವೇಳೆ ನಿಶ್ಚಯವಿಲ್ಲದಿದ್ದರೆ ಏಕೆ ಕುಳಿತುಕೊಳ್ಳುತ್ತೀರಿ? ಕಾರಣ ಬೇಕಾಗಿದೆ. ಪರಿಚಯವಿಲ್ಲದೆ ಯಾರ ಸಮ್ಮುಖದಲ್ಲಿ ಕುಳಿತುಕೊಳ್ಳಲೂ ಸಾಧ್ಯವಿಲ್ಲ. ಇವರು ಸನ್ಯಾಸಿಯಾಗಿದ್ದಾರೆ, ಇವರು ಗವರ್ನರ್ ಆಗಿದ್ದಾರೆ ಎಂದು ಪ್ರಪಂಚದಲ್ಲಿ ಒಬ್ಬರಿಗೊಬ್ಬರು ಪರಿಚಯ ಕೊಡುತ್ತಾರೆ. ಇಲ್ಲಿ ತಂದೆಯು ಗುಪ್ತವಾಗಿದ್ದಾರೆ, ಪರಮಪಿತ ಪರಮಾತ್ಮ ಪರಮಧಾಮದಲ್ಲಿರುವವರೇ ಬಂದು ತಿಳಿಸುತ್ತಿದ್ದಾರೆ ನಂತರ ಇದರಲ್ಲಿ ಸರ್ವವ್ಯಾಪಿಯ ಮಾತು ಬರುವುದಿಲ್ಲ. ಓ ಭಗವಂತನೇ ಎಂದು ಆತ್ಮವು ನೆನಪು ಮಾಡುತ್ತದೆ, ಸ್ವಯಂ ಭಗವಂತನಾಗಿದ್ದರೆ ಮತ್ತೆ ಏತಕ್ಕಾಗಿ ಕರೆಯುತ್ತೀರಿ! ಇದು ಸ್ವಲ್ಪ ತಿಳಿದುಕೊಳ್ಳುವ ಮಾತಾಗಿದೆ ಆದರೆ ತಿಳಿದುಕೊಳ್ಳದ ಹಾಗೆ ಮಾಯೆಯು ಮಾಡಿಬಿಡುತ್ತದೆ. ಯಾವ ಮಾತು ಮುಖದಿಂದ ಹೇಳುತ್ತಾರೆಯೋ ಅದರ ಮೇಲೆ ವಿಶ್ವಾಸವು ಬರುವುದಿಲ್ಲ. ಮಾಯೆಯು ಸಂಶಯಬುದ್ಧಿಯವರನ್ನಾಗಿ ಮಾಡಿಬಿಡುತ್ತದೆ. ಓ ಗಾಡ್ಫಾದರ್ ಎಂದು ಕರೆಯುತ್ತಾರೆ ನಂತರ ನಾವೇ ತಂದೆಯಾಗಿದ್ದೇವೆಂದು ಹೇಳುತ್ತಾರೆ ಮತ್ತೆ ಹಾಗೆ ಏಕೆ ಕರೆಯುತ್ತೀರಿ? ತಂದೆ ಎನ್ನುವ ಅಕ್ಷರವನ್ನು ಮಕ್ಕಳೇ ಹೇಳುತ್ತಾರೆ. ಒಬ್ಬ ತಂದೆಯನ್ನೇ ನೆನಪು ಮಾಡಬೇಕು. ಈಗ ನೀವು ಸಮ್ಮುಖದಲ್ಲಿ ಕುಳಿತಿದ್ದೀರಿ. ನಾವು ಪರಮಪಿತ ಪರಮಾತ್ಮನ ಮಕ್ಕಳಾಗಿದ್ದೇವೆಂದು ನಿಮಗೆ ತಿಳಿದಿದೆ. ಅವರಿಂದ ನಾವು ಆಸ್ತಿಯನ್ನು ತೆಗೆದುಕೊಳ್ಳುತ್ತೇವೆ. ಈಗಂತೂ ನಾವು ಮರೆಯುವುದಿಲ್ಲ.

ಮಕ್ಕಳೇ, ಅಶರೀರಿಗಳಾಗಿ ಮತ್ತು ಪವಿತ್ರರಾಗಿ ಎಂದು ತಂದೆಯು ತಿಳಿಸುತ್ತಾರೆ. ನಾನು ನಿಮ್ಮನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ. ನಾನು ನಿರ್ಗುಣಹಾರನಲ್ಲಿ ಯಾವುದೇ ಗುಣವಿಲ್ಲವೆಂದು ದೇವತೆಗಳ ಮುಂದೆ ಗಾಯನ ಮಾಡುತ್ತಾರೆ. ದೇವತೆಗಳ ಮಹಿಮೆಯನ್ನು ಗಾಯನ ಮಾಡುತ್ತಾರೆ. ತಮ್ಮನ್ನು ತಾವೇ ನೀಚ, ಪಾಪಿ ಎಂದು ತಿಳಿದುಕೊಳ್ಳುತ್ತಾರೆ. ಅವಶ್ಯವಾಗಿ ಮೊದಲು ಸಂಪೂರ್ಣ ನಿರ್ವಿಕಾರಿ ಪ್ರಪಂಚವಿತ್ತು. ಅದಕ್ಕೆ ಸ್ವರ್ಗ, ಶಿವಾಲಯವೆಂದು ಹೇಳಲಾಗುತ್ತಿತ್ತು. ಶಿವತಂದೆಯೇ ಸ್ಥಾಪನೆ ಮಾಡಿರುವುದಕ್ಕೆ ಸ್ವರ್ಗವೆಂದು ಹೇಳಲಾಗುತ್ತದೆ. ಸ್ವರ್ಗವಾಗುತ್ತದೆ ಎಂದು ಭಾರತವಾಸಿಗಳಿಗೆ ತಿಳಿದಿದೆ ಆದರೆ ಭಾರತವು ಸ್ವರ್ಗವಾಗಿತ್ತು, ಆದಿಸನಾತನ ದೇವಿ-ದೇವತೆಗಳು ರಾಜ್ಯ ಮಾಡುತ್ತಿದ್ದರೆಂದು ಮರೆತಿದ್ದಾರೆ. ಯಾರಾದರೂ ಸತ್ತರೆ ಸ್ವರ್ಗಕ್ಕೆ ಹೋದರೆಂದು ಹೇಳುತ್ತಾರೆ. ಸ್ವರ್ಗವು ಸತ್ಯಯುಗದಲ್ಲಿರುತ್ತದೆ ಕಲಿಯುಗದಲ್ಲಿ ಇರುವುದಿಲ್ಲ. ಸ್ವರ್ಗವಾಸಿಯಾದರು ಎಂದು ಪತ್ರಿಕೆಗಳಲ್ಲಿ ಯಾವಾಗ ಬರೆಯುತ್ತಾರೋ. ಆಗ ನೀವು ಕೇಳಿ- ಸ್ವರ್ಗ ಎಲ್ಲಿರುತ್ತದೆ? ಪರಮಧಾಮದಲ್ಲಿ ಪರಮಾತ್ಮನ ಬಳಿ ಹೋದರು ಅದೇ ಸ್ವರ್ಗವಾಗಿದೆ ಅಥವಾ ನಿರ್ವಾಣಧಾಮಕ್ಕೆ ಹೋದರೆಂದು ಹೇಳುತ್ತಾರೆ ನಂತರ ಜ್ಯೋತಿ, ಜ್ಯೋತಿಯಲ್ಲಿ ಸಮಾವೇಶವಾಯಿತು ಎಂದು ಹೇಳುತ್ತಾರೆ. ಅಕ್ಷರಗಳಲ್ಲಿ ಎಷ್ಟೊಂದು ಅಂತರವಿದೆ, ಅದಕ್ಕೆ ಬ್ರಹ್ಮ ಮಹಾತತ್ವವೆಂದು ಹೇಳಲಾಗುತ್ತದೆ. ಇದು ಆಕಾಶ ತತ್ವವೆಂದು ಹೇಳಲಾಗುತ್ತದೆ, ಇದಕ್ಕೆ ಮಹಾತತ್ವವೆಂದು ಹೇಳಲಾಗುವುದಿಲ್ಲ. ಬ್ರಹ್ಮ ಮಹಾತತ್ವ, ಬ್ರಹ್ಮಾಂಡದಲ್ಲಿ ನಾವಾತ್ಮಗಳು ಅಂಡಾಕಾರವಾಗಿರುತ್ತೇವೆ. ಅದು ಮಹಾತತ್ವವಾಗಿದೆ. ತಂದೆಯೂ ಸಹ ಅಲ್ಲಿಯೇ ಇರುತ್ತಾರೆ ಅದಕ್ಕೆ ಪರಮಧಾಮವೆಂದು ಕರೆಯುತ್ತಾರೆ. ಬಾಕಿ ಬ್ರಹ್ಮ ಮಹಾತತ್ವದಲ್ಲಿ ಯಾರೂ ಲೀನವಾಗುವುದಿಲ್ಲ. ಯಾವಾಗ ಸಮ್ಮುಖದಲ್ಲಿ ಕುಳಿತುಕೊಳ್ಳುತ್ತೇವೆಯೋ ಆಗ ಅನೇಕ ವಿಷಯಗಳನ್ನು ತಿಳಿಸುತ್ತಾರೆ. ಭಕ್ತರು ಭಗವಂತನನ್ನು ಹುಡುಕುತ್ತಿದ್ದಾರೆ.

ಭಕ್ತಿಮಾರ್ಗದಲ್ಲಿ ಎಲ್ಲರಿಗಿಂತ ಹೆಚ್ಚು ಭಕ್ತಿ ಯಾರು ಮಾಡುತ್ತಾರೆಂದು ನೀವು ತಿಳಿದಿದ್ದೀರಿ. ಯಾರು ಮೊದಲು ಪೂಜ್ಯರಾಗಿದ್ದರೋ ಅವರೇ ನಂತರ ಮೊದಲ ಪೂಜಾರಿ ಅಂದರೆ ಭಕ್ತರಾಗುತ್ತಾರೆ. ಇಲ್ಲಿ ಕೇವಲ ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ತಾವೇ ಪೂಜ್ಯ, ತಾವೇ ಪೂಜಾರಿಗಳೆಂದು ಗಾಯನ ಮಾಡುತ್ತಾರೆ ಆದರೆ ಅವರು ಪರಮಾತ್ಮ ತಂದೆ ಸ್ವಯಂ ಪೂಜ್ಯ, ಪೂಜಾರಿಯಾಗುತ್ತಾರೆಂದು ತಿಳಿದುಕೊಳ್ಳುತ್ತಾರೆ. ಇದು ತಪ್ಪಾಗಿದೆ. ತಂದೆಯೇ ಬಂದು ಮಕ್ಕಳನ್ನು ಶ್ರೇಷ್ಠ ಮತ್ತು ಮಹಿಮೆಗೆ ಯೋಗ್ಯರನ್ನಾಗಿ ಮಾಡುತ್ತಾರೆ ಆದರೆ ಎಲ್ಲರಿಗೂ ಸ್ವರ್ಗದ ಜೀವನ್ಮುಕ್ತಿಯು ಸಿಗುವುದಿಲ್ಲ. ಜೀವನ್ಮುಕ್ತಿಯು ಯಾವಾಗ ಮಾಯಾಬಂಧನಗಳಿಂದ ಮುಕ್ತರಾಗುತ್ತಾರೆಯೋ ಆಗ ಸಿಗುತ್ತದೆ. ಜೀವನ್ಮುಕ್ತ ಅರ್ಥಾತ್ ಮಾಯೆಯ ಬಂಧನದಿಂದ ಮುಕ್ತ. ಎಲ್ಲರೂ ಸತ್ಯಯುಗದಲ್ಲಿ ಬರುತ್ತಾರೆಂದಲ್ಲ. ಯಾರು ರಾಜಯೋಗವನ್ನು ಕಲಿಯುತ್ತಾರೆಯೋ ಅವರೇ ಸತ್ಯಯುಗದಲ್ಲಿ ಬರುತ್ತಾರೆ. ಜ್ಞಾನಮಾರ್ಗದಲ್ಲಿ ಎಷ್ಟೊಂದು ಬಂಧನಗಳಿಂದ ಬರಬೇಕು. ಮೀರಾಗೂ ಸಹ ಅಷ್ಟೊಂದು ಬಂಧನವಿರಲಿಲ್ಲ, ಕೃಷ್ಣನ ಜೊತೆ ಮಿಲನ ಮಾಡಬೇಕು ಅದರಿಂದ ಪವಿತ್ರವಾಗುತ್ತೇನೆಂದು ಕೇವಲ ಹೇಳುತ್ತಿದ್ದಳು. ಆದರೆ ನೀವು ಕೃಷ್ಣಪುರಿಗೆ ಹೋಗಬೇಕಾಗಿದೆ. ಆ ಮೀರಾ ಭಕ್ತ ಶಿರೋಮಣಿಯಾಗಿದ್ದಳು, ಯಾವ ವಿಜಯಮಾಲೆಯನ್ನು ಪೂಜೆ ಮಾಡುತ್ತಾರೆಯೋ ಆ ವಿಜಯಮಾಲೆಯ ಶಿರೋಮಣಿಗಳು ನೀವಾಗಿದ್ದೀರಿ. ಭಕ್ತರ ಮಾಲೆಯನ್ನು ಯಾರೂ ಪೂಜೆ ಮಾಡುವುದಿಲ್ಲ. ಯಾರು ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತಾರೆಯೋ ಅವರ ಮಾಲೆಯನ್ನು ಪೂಜೆ ಮಾಡುತ್ತಾರೆ. ಭಕ್ತರು ನೀವು ಮಕ್ಕಳ ಮಾಲೆಯನ್ನು ಪೂಜೆ ಮಾಡುತ್ತಾರೆ, ಮೊದಲು ರುದ್ರಮಾಲೆಯಾಗಿದೆ ನಂತರ ವಿಷ್ಣುವಿನ ಮಾಲೆಯಾಗುತ್ತದೆ ಆದರೆ ಮಾಲೆಯು ಯಾರದಾಗುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಕೇವಲ ಮಾಲೆಯನ್ನು ಸ್ಮರಣೆ ಮಾಡುತ್ತಾರೆ. ಈಗ ನೀವು ಭಕ್ತರ ಮಾಲೆಯನ್ನು ಸ್ಮರಣೆ ಮಾಡುವುದಿಲ್ಲ, ಭಕ್ತರು ನೀವು ಮಕ್ಕಳ ಮಾಲೆಯನ್ನು ಸ್ಮರಣೆ ಮಾಡುತ್ತಾರೆ. ನಮ್ಮದು ವಿಜಯಮಾಲೆಯಾಗುತ್ತಿದೆ ಎಂದು ನಿಮಗೆ ತಿಳಿದಿದೆ. ಕೇವಲ ನಾವೇ ಸ್ವಯಂ ಪೂಜಾರಿಯಾಗಿ ಮಾಲೆಯನ್ನು ಜಪಿಸುತ್ತಿದ್ದೆವು ನೀವೇ ರಾಜ್ಯ ಮಾಡುತ್ತಿದ್ದಿರಿ ನಂತರ ನೀವೇ ಎಲ್ಲರಿಗಿಂತ ಮೊದಲು

ಹೋಗಿ ಮಾಲೆಯನ್ನು ಜಪಿಸುತ್ತಿದ್ದಿರಿ. ನಿಮ್ಮಿಂದಲೇ ಭಕ್ತಿಯನ್ನು ಅನ್ಯರು ಕಲಿತುಕೊಳ್ಳುತ್ತಾರೆ. ನೀವೇ ವಿಶ್ವವನ್ನು ಸ್ವರ್ಗವನ್ನಾಗಿ ಮಾಡುತ್ತೀರಿ.

ತಂದೆಯೇ ರಾಜಯೋಗವನ್ನು ಕಲಿಸುವುದಕ್ಕೆ ಗೀತೆ ಎಂದು ಹೆಸರನ್ನಿಡಲಾಗಿದೆ ಏಕೆಂದರೆ ಧರ್ಮಶಾಸ್ತ್ರದ ಹೆಸರು ಬೇಕಲ್ಲವೆ. ಭಲೆ ಜ್ಞಾನವು ಪ್ರಾಯಃಲೋಪವಾಗುತ್ತದೆ ಆದರೆ ಶಾಸ್ತ್ರಗಳಂತೂ ಆಗುತ್ತದೆಯಲ್ಲವೆ. ಶಾಸ್ತ್ರಗಳನ್ನು ಮಾಡಿ ಅದಕ್ಕೆ ಶ್ರೀಮದ್ಭಗವದ್ಗೀತಾ ಎಂದು ಇಡಲಾಗಿದೆ. ಭಕ್ತಿಮಾರ್ಗಕ್ಕಾಗಿ ಗೀತೆಯನ್ನು ಮಾಡುತ್ತಾರೆ. ಆ ಗೀತೆಯು ಜ್ಞಾನಮಾರ್ಗಕ್ಕಾಗಿ ಅಲ್ಲ, ಎಷ್ಟೊಂದು ಗೀತೆಯನ್ನು ತಿಳಿಸುತ್ತಾರೆ. ನಿಮಗೆ ರಾಜಯೋಗವನ್ನು ಕಲಿಸುತ್ತೇನೆಂದು ಹೇಳುವುದಿಲ್ಲ ಆದರೆ ಭಗವಂತನೇ ರಾಜಯೋಗವನ್ನು ಕಲಿಸಿ ಹೋದರೆಂದು ಹೇಳುತ್ತಾರೆ. ಕೇವಲ ಅದರ ಶಾಸ್ತ್ರಗಳನ್ನು ಕುಳಿತು ಓದುತ್ತಾರೆ. ಈಗ ಭಗವಂತನ ಮುಖಾಂತರ ಸಮ್ಮುಖದಲ್ಲಿ ಅದೇ ಗೀತೆಯನ್ನು ಕೇಳಿ ನಾವು ಸ್ವರ್ಗದ ಮಾಲೀಕರಾಗುತ್ತಿದ್ದೇವೆ. ನಾನು ನೀವು ಮಕ್ಕಳಿಗೆ ಒಂದೇಬಾರಿ ರಾಜಯೋಗವನ್ನು ಕಲಿಸಿ ರಾಜರಿಗಿಂತ ರಾಜರನ್ನಾಗಿ ಮಾಡಲು ಬಂದಿದ್ದೇನೆಂದು ತಂದೆಯು ತಿಳಿಸುತ್ತಾರೆ. ಎಲ್ಲಿಯವರೆಗೆ ಸದ್ಗತಿಯನ್ನು ಕೊಡುವ ತಂದೆಯು ಬರುವುದಿಲ್ಲವೋ ಅಲ್ಲಿಯವರೆಗೆ ಭಕ್ತಿಮಾರ್ಗದ ಮಹಿಮೆಯು ಅವಶ್ಯವಾಗಿ ನಡೆಯುತ್ತದೆ. ಯಾರು ಕಲ್ಪದ ಮೊದಲು ಬಂದಿದ್ದರು ಅವರೇ ಈಗಲೂ ಬಂದು ಕೇಳುತ್ತಾರೆ. ಕೊನೆಗೆ ಬಹಳಷ್ಟು ಮಂದಿ ಆಗುತ್ತಾರೆ. ಸೂರ್ಯವಂಶಿ, ಚಂದ್ರವಂಶಿ ರಾಜಧಾನಿಯು ಸ್ಥಾಪನೆಯಾಗುತ್ತಿದೆ ಅಂದಾಗ ಎಷ್ಟೊಂದು ಜನ ಬರುತ್ತಾರೆ ಆದ್ದರಿಂದ ಜ್ಞಾನದ ವಿನಾಶವಾಗುವುದಿಲ್ಲ. ಸಾಹುಕಾರ ಪ್ರಜೆ, ಸಾಧಾರಣ ಪ್ರಜೆ, ಕೆಲಸಗಾರರು ಎಲ್ಲರೂ ಬೇಕಾಗುತ್ತದೆ. ಎಷ್ಟೊಂದು ದೊಡ್ಡ ರಾಜಧಾನಿಯು ಸ್ಥಾಪನೆಯಾಗುತ್ತಿದೆ. ಹೇಗೆ ಸತ್ಯಯುಗೀ ರಾಜಧಾನಿಯು ಸ್ಥಾಪನೆಯಾಗುತ್ತಿದೆ ಒಂದುವೇಳೆ ಇದನ್ನು ತಿಳಿದುಕೊಂಡರೆ ತಿಳಿಸಬೇಕೆಂದು ಮನುಷ್ಯರಿಗೆ ತಿಳಿದಿಲ್ಲ ಏಕೆಂದರೆ ತಂದೆಯನ್ನೇ ಮರೆತಿದ್ದಾರೆ. ನಿರಾಕಾರ ಶಿವಭಗವಾನುವಾಚ ಎನ್ನುವುದಕ್ಕೆ ಬದಲಾಗಿ ಕೃಷ್ಣ ಭಗವಾನುವಾಚ ಎಂದು ಬರೆದಿದ್ದಾರೆ. ಶಿವಜಯಂತಿಯ ತಕ್ಷಣ ಕೃಷ್ಣಜಯಂತಿಯು ಬರುತ್ತದೆ. ಆ ಕೃಷ್ಣ ವೈಕುಂಠನಾಥನಾಗಿದ್ದಾನೆ. ಆದರೆ ಇಲ್ಲಿ ತಂದೆಯೇ ಕುಳಿತು ನಿಮ್ಮನ್ನು ವೈಕುಂಠನಾಥರನ್ನಾಗಿ ಮಾಡುತ್ತಿದ್ದಾರೆ. ಕೃಷ್ಣನನ್ನು ದ್ವಾಪರದಲ್ಲಿ ಕರೆತಂದಿದ್ದಾರೆ. ಭಾರತದಲ್ಲಿ ಎಷ್ಟೊಂದು ಜ್ಞಾನದ ಸೂತ್ರವು ಗೊಂದಲವಾಗಿದೆ.

ಈಗ ಚೆನ್ನಾಗಿ ಧಾರಣೆ ಮಾಡಿಕೊಂಡು ಜ್ಞಾನಪೂರ್ಣರಾಗಬೇಕು. ನಾವು ಎಷ್ಟು ಅಂಕಗಳಲ್ಲಿ ಉತ್ತೀರ್ಣರಾಗುತ್ತೇವೆಂದು ನೋಡಿಕೊಳ್ಳಬೇಕು. ಈಗ ಉತ್ತೀರ್ಣರಾದರೆ ಕಲ್ಪ-ಕಲ್ಪಾಂತರದಲ್ಲಿಯೂ ಆಗುತ್ತೇವೆ. ಗೃಹಸ್ಥ ವ್ಯವಹಾರದಲ್ಲಿದ್ದು ವಿದ್ಯೆಯನ್ನು ಓದಬೇಕು, ವೃದ್ಧರು, ಸ್ತ್ರೀ-ಪುರುಷ, ಸೊಸೆ ಮುಂತಾದವರೆಲ್ಲರೂ ಬಂದು ಓದುವಂತಹ ಸ್ಥಳ ಬೇರೆಲ್ಲಿಯೂ ಸಿಗುವುದಿಲ್ಲ. ಶಾಸ್ತ್ರಗಳನ್ನೂ ಸಹ ಈ ರೀತಿ ಓದುವುದಿಲ್ಲ. ನೀವು ಶಾಸ್ತ್ರವನ್ನು ಓದಬೇಕಾಗಿಲ್ಲವೆಂದು ಮಾತೆಯರಿಗೆ ಹೇಳುತ್ತಾರೆ. ಪುರುಷರೇ ಇಲ್ಲಿ ಪಂಡಿತರಾಗಿರುತ್ತಾರೆ ಆದರೆ ಇಲ್ಲಿ ಯಾರ್ಯಾರು ವಿದ್ಯೆಯನ್ನು ಓದುತ್ತಾರೆಂದು ಹೇಳುತ್ತಾರೆ. ಹೇಗೇಗೆ ವೃದ್ಧರು ಬರುತ್ತಾರೆ, ಇದು ಅದ್ಭುತವಾಗಿದೆಯಲ್ಲವೆ. ಗೃಹಸ್ಥ ವ್ಯವಹಾರದಲ್ಲಿದ್ದು ಕಮಲಪುಷ್ಪ ಸಮಾನ ಪವಿತ್ರರಾಗಿ ರಾಜಯೋಗವನ್ನು ಕಲಿಯಬೇಕು. ಇಲ್ಲಿ ನೀವು ಭಗವಂತನ ವಿದ್ಯಾರ್ಥಿಗಳಾಗಿದ್ದೀರಿ. ಇದರ ಹೆಸರು ಈಶ್ವರೀಯ ಬ್ರಹ್ಮಾಕುಮಾರ-ಕುಮಾರಿಯರ ಕಾಲೇಜ್ ಆಗಿದೆ. ಈಶ್ವರ ಬ್ರಹ್ಮನ ಮುಖಾಂತರ ವಿದ್ಯೆಯನ್ನು ಓದಿಸುತ್ತಿದ್ದಾರೆ. ಬ್ರಹ್ಮನು ವಿಷ್ಣುವಿನ ನಾಭಿಯಿಂದ ಬರುವುದಿಲ್ಲ. ಇದಕ್ಕೆ ಪರಮಪಿತ ಪರಮಾತ್ಮನ ನಾಭಿ ಎಂದು ಹೇಳಲಾಗುತ್ತದೆ. ಬೀಜರೂಪವಂತೂ ಶಿವತಂದೆಯಾಗಿದ್ದಾರೆ. ಅವರಿಂದ ಬ್ರಹ್ಮಾ-ವಿಷ್ಣು-ಶಂಕರರು ಬರುತ್ತಾರೆ. ಮೂವರ ಅರ್ಥವೂ ಸಹ ಬೇರೆ-ಬೇರೆಯಾಗಿದೆ. ಅವಶ್ಯವಾಗಿ ವಿಷ್ಣುವಿಗೆ ಸದಾಕಾಲ ಲಕ್ಷ್ಮಿಯನ್ನು ಜೊತೆಯಲ್ಲಿರಿಸುತ್ತಾರೆ ಎನ್ನುವುದು ನೀವು ಮಕ್ಕಳು ಈಗ ತಿಳಿದುಕೊಂಡಿದ್ದೀರಿ. ನರ ನಾರಾಯಣನ ಮಂದಿರವಾಗಿದೆ ಅಂದಾಗ ಅಲ್ಲಿ ಚತುರ್ಭುಜವನ್ನೂ ಸಹ ಮಾಡುತ್ತಾರೆ. ನಾರಾಯಣನಾಗುವುದರಿಂದ ಅವರ ಜೊತೆಗೆ ಲಕ್ಷ್ಮಿಯನ್ನೂ ಸಹ ತೋರಿಸುತ್ತಾರೆ. ನರ ನಾರಾಯಣ, ನಾರಿ ಲಕ್ಷ್ಮಿಯಾಗಿದ್ದಾರೆ. ನರ ನಾರಾಯಣನಿಗೆ ನಾಲ್ಕುಭುಜಗಳನ್ನು ಕೊಡಬೇಕಾಗುತ್ತದೆ. ಈ ರೀತಿ ನಿಯಮಾನುಸಾರ ಮಂದಿರವನ್ನು ಮಾಡಬೇಕು ಆದರೆ ನರ ನಾರಾಯಣನ ಮಂದಿರದಿಂದ ಏನೂ ಸಹ ತಿಳಿದುಕೊಳ್ಳುವುದಿಲ್ಲ. ನರ ನಾರಾಯಣನ ಜೊತೆ ಲಕ್ಷ್ಮಿಯನ್ನೂ ಸಹ ತೋರಿಸುತ್ತಾರೆ. ದೀಪಾವಳಿಯಲ್ಲಿ ಮಹಾಲಕ್ಷ್ಮಿಯ ಪೂಜೆ ಮಾಡುತ್ತಾರೆ. ಮಾತೆಯರದು ಸಹ ಎಷ್ಟೊಂದು ಮಹಿಮೆಯಿದೆ, ಜಗದಂಬಾರವರದೂ ಸಹ ಎಷ್ಟೊಂದು ಮಹಿಮೆಯಿದೆ. ಜಗದಂಬಾ ಬಹಳ ಮಧುರವಾಗಿದ್ದಾರೆ ಏಕೆಂದರೆ ಕುಮಾರಿಯಾಗಿದ್ದಾರೆ. ಇವರು ಅಧರ್ ಕುಮಾರಿಯಾಗಿದ್ದಾರೆ ಅಂದಾಗ ಭಾರತದಲ್ಲಿ ಕುಮಾರಿಯರಿಗೆ ಬಹಳ ಗೌರವವಿದೆ ಆದರೆ ಅದರ ಮಹತ್ವವನ್ನು ಯಾರೂ ತಿಳಿದಿಲ್ಲ. ಜಗದಂಬಾರವರದು ಬಹಳ ಗೌರವವಿದೆ. ತಂದೆಯದು ಅಷ್ಟು ಮಹತ್ವವಿಲ್ಲ. ತಂದೆಯೇ ಬಂದು ಮಾತೆಯರನ್ನು ಅಷ್ಟು ಶ್ರೇಷ್ಠರನ್ನಾಗಿ ಮಾಡುತ್ತಿದ್ದಾರೆ ಅಂದಾಗ ಬಹದ್ದೂರರಾಗಬೇಕು. ಸಿಂಹದ ಮೇಲೆ ಸವಾರಿ ಮಾಡಬೇಕು. ಅತ್ಯಾಚಾರವಾಗುತ್ತಿದೆ ಆದರೆ ತಂದೆಯ ಮಕ್ಕಳಾಗಿದ್ದೀರಿ ಅಂದಾಗ ಭೂಮಿಯೇ ಬಾಯಿಬಿಟ್ಟರೂ ಸಹ ಧರ್ಮವನ್ನು ಬಿಡಬಾರದು. ಪವಿತ್ರರಾಗಿ ಶ್ರೇಷ್ಠ ಮಹಿಮೆಯನ್ನು ಪಡೆದುಕೊಳ್ಳಬೇಕು ಏಕೆಂದರೆ ಮೀರಾನೂ ಸಹ ಪವಿತ್ರವಾಗಿದ್ದರು. ತಂದೆಯು ಕುಮಾರಿಯರಿಗೆ ಹೇಳುತ್ತಾರೆ- ನಾವು ಪವಿತ್ರರಾಗಿ ವೈಕುಂಠದ ಮಾಲೀಕರಾಗುತ್ತೇವೆಂದು ಹೇಳಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸತ್ಯವಾದ ವಾರಸುಧಾರರಾಗುವುದಕ್ಕಾಗಿ ಬುದ್ಧಿವಂತರಾಗಬೇಕು. ವಿದ್ಯೆಯನ್ನು ಚೆನ್ನಾಗಿ ಧಾರಣೆ ಮಾಡಿಕೊಂಡು ಜ್ಞಾನಪೂರ್ಣರಾಗಬೇಕು. ತಂದೆಯ ಸಮಾನ ಮಹಿಮಾಯೋಗ್ಯರಾಗಬೇಕು.

2. ವಿಜಯಮಾಲೆಯ ಶಿರೋಮಣಿಯಾಗಲು ಮಾಯೆಯ ಬಂಧನಗಳನ್ನು ತುಂಡು ಮಾಡುತ್ತಿರಬೇಕು. ಬಹಳ-ಬಹಳ ಬಹದ್ದೂರರಾಗಿ, ಪವಿತ್ರರೂ ಅವಶ್ಯವಾಗಿ ಆಗಬೇಕಾಗಿದೆ.

ವರದಾನ: ಇಚ್ಛೆಗಳ ರೂಪಿ ಮೃಗತೃಷ್ಣಾದ ಹಿಂದೆ ಓಡುವ ಬದಲು ಸತ್ಯ ಸಂಪಾದನೆ ಜಮಾ ಮಾಡುವಂತಹ ಇಚ್ಛಾ ಮಾತ್ರಂ ಅವಿದ್ಯೆ ಭವ

ಕೆಲವು ಮಕ್ಕಳು ಯೋಚಿಸುತ್ತಾರೆ ಒಂದುವೇಳೆ ನಮ್ಮ ಹೆಸರಿನಲ್ಲಿ ಲಾಟರಿ ಒಡೆದು ಬಂದರೆ ನಾನು ಯಜ್ಞದಲ್ಲಿ ಹಾಕುವೆ ಎಂದು. ಆದರೆ ಇಂತಹ ಹಣ ಯಜ್ಞದಲ್ಲಿ ಹಾಕಲು ಆಗುವುದಿಲ್ಲ. ಎಷ್ಟೋ ಬಾರಿ ಇಚ್ಛೆ ಸ್ವಯಂನದಾಗಿರುವುದು ಮತ್ತೆ ಹೇಳುತ್ತಾರೆ ಲಾಟರಿ ಬಂದರೆ ಸೇವೆ ಮಾಡುತ್ತೇನೆ! ಆದರೆ ಈಗಿನ ಕೋಟ್ಯಾಧಿಪತಿಯಾಗುವುದು ಅರ್ಥಾತ್ ಸದಾ ಕಾಲದ ಕೋಟಿಗಳನ್ನು ಕಳೆದುಕೊಳ್ಳುವುದು. ಇಚ್ಛೆಗಳ ಹಿಂದೆ ಒಡುವುದು ಎಂದರೆ ಹೇಗೆ ಮೃಗತೃಷ್ಣ ದ ಹಿಂದೆ ಓಡುವುದು. ಆದ್ದರಿಂದ ಸತ್ಯ ಸಂಪಾದನೆ ಜಮಾ ಮಾಡಿಕೊಳ್ಳಿ, ಹದ್ದಿನ ಇಚ್ಛೆಗಳಿಂದ ಇಚ್ಛಾ ಮಾತ್ರಂ ಅವಿದ್ಯೆ ಆಗಿ.

ಸ್ಲೋಗನ್: ವಿಘ್ನವನ್ನು ವಿಘ್ನವೆಂದು ನೋಡುವ ಬದಲು ಆಟವೆಂದು ತಿಳಿದು ನಡೆದಾಗ ನಗುತ್ತಾ ಕುಣಿಯುತ್ತಾ, ಹಾಡುತ್ತಾ ಪಾರು ಮಾಡಿಬಿಡುವಿರಿ.